*(ಇಂದು ದಿನಾಂಕಃ **30/07/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)*

**<u>ಮುಂದುವರೆದ ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀಮತಿ ಆರ್.ಎಸ್.ಬಿ. ವಕೀಲರಿಂದಃ–</u>**

7. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ನಿಜ ಇರುತ್ತದೆ. ನಾನು ಹಾಜರುಮಾಡಿದ ಹಾಜರಾತಿ ಸಹಿತ ಡಿಪೋ ಮ್ಯಾನೇಜರ ವರದಿಯನ್ನು ನಿಆರ್-1, ಕರೆಪತ್ರವನ್ನು ನಿಆರ್-2, ಸೇವೆಯ ಇತಿಹಾಸವನ್ನು ನಿಆರ್-3, ಆಪಾದನಾ ಪತ್ರವನ್ನು ನಿಆರ್-4, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್-5, ವಿಚಾರಣಾಧಿಕಾರಿ ನೇಮಕಾತಿ ಆದೇಶವನ್ನು ನಿಆರ್-6, ವಿಚಾರಣಾಧಿಕಾರಿ ಆರ್ಡರ ಶೀಟನ್ನು ನಿಆರ್-7, ತಿಳುವಳಿಕೆ ಪತ್ರ ಮತ್ತು ಅಂಚೆ ಸ್ವೀಕೃತಿ ಪತ್ರಗಳನ್ನು ನಿಆರ್-8 ರಿಂದ 25, ವಿಚಾರಣೆಯ ನಡುವಳಿಕೆಗಳನ್ನು ನಿಆರ್-26 ರಿಂದ 29, ವಿಚಾರಣಾ ಫಲಿತಾಂಶ ವರದಿಯನ್ನು ನಿಆರ್-30, ತಿಳುವಳಿಕೆ ಪತ್ರವನ್ನು ನಿಆರ್-31, ಕಾರಣ ಕೇಳಿ ನೀಡಿದ ನೋಟೀಸನ್ನು ನಿಆರ್-32, ಸೇವೆಯ ಇತಿಹಾಸದ ವಿವರಗಳನ್ನು ನಿಆರ್-33, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್-34, ಸೇವೆಯಿಂದ ವಜಾ ಮಾಡಲಾದ ಆದೇಶವನ್ನು ನಿಆರ್-35, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್-36, ಚೆಕ್ಕು ಪ್ರತಿಯನ್ನು ನಿಆರ್-37, ಅಂಚೆ ಸ್ವೀಕೃತಿ ಪತ್ರವನ್ನು ನಿಆರ್-38, ಸೀರಿಯಲ್ ಅಪ್ಲಿಕೇಶನ್ ಮೇಲಿನ ಆದೇಶದ ಪ್ರತಿಯನ್ನು ನಿಆರ್-39 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಂ.ಎಚ್.ಬಿ. ವಕೀಲರಿಂದಃ–</u>**

*(ಅರ್ಜಿದಾರರ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.)*

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.

*(ಇಂದು ದಿನಾಂಕಃ **30/07/2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)*

**<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಕೆ.ಸಿ.ಪಿ. (ಎಂ.ಎಚ್.ಬಿ.) ವಕೀಲರಿಂದಃ–</u>**

8. ನಿಆರ್-1 ಮೂಲ ದಾಖಲಾತಿಯ ಪ್ರತಿ ಅಲ್ಲ ಎನ್ನುವುದು ಸುಳ್ಳು. ದಿನಾಂಕಃ21/01/2018 ನಿಆರ್-1 ರಲ್ಲಿ ಕಾಣಿಸಿದ ಕೊನೆಯ ಹಾಜರಾತಿ ಇರುತ್ತದೆ.

ದೋಷಾರೋಪಣಾ ಪತ್ರ ನಿಆರ್-1 ಮತ್ತು 4 ರಲ್ಲಿ ನಮೂದು ಮಾಡಿದ ಗೈರು ಹಾಜರಾತಿ ಪರಸ್ಪರ ಹೊಂದಾಣಿಕೆಯಾಗುವುದಿಲ್ಲ ಎನ್ನುವುದು ಸುಳ್ಳು. ನಾವು ಹಾಜರುಮಾಡಲಾದ ಅಂಚೆ ಸ್ವೀಕೃತಿ ಪತ್ರಗಳಲ್ಲಿ ಅರ್ಜಿದಾರನ ಸಹಿ ಇಲ್ಲ ಎನ್ನುವುದು ಸುಳ್ಳು.

9. ನಿಆರ್-7 ರಲ್ಲಿ ದಿನಾಂಕಗಳನ್ನು ನಂತರ ಬರೆಯಲಾಗಿದೆ ಎನ್ನುವುದು ಸುಳ್ಳು. ಸಂರಕ್ಷಣಾ ಹೇಳಿಕೆ ನೀಡಲು ಅರ್ಜಿದಾರನಿಗೆ ಅವಕಾಶ ಕೊಟ್ಟಿಲ್ಲ ಎನ್ನುವುದು ಸುಳ್ಳು. ನಿಆರ್-7 ರಲ್ಲಿ ದಿನಾಂಕಃ11/6/2019, 10/10/2019, 30/10/2019 ಮತ್ತು 21/1/2020 ರಂದು ಮಂಡನಾಧಿಕಾರಿ ಸಹಿ ಇಲ್ಲ ಎನ್ನುವುದು ನಿಜ. ನಮ್ಮ ಅನುಕೂಲಕ್ಕೆ ತಕ್ಕಂತೆ ನಿಆರ್-7 ನ್ನು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸುಳ್ಳು. ಯಾವ ದಿನಾಂಕದವರೆಗೆ ಅರ್ಜಿದಾರ ಗೈರು ಹಾಜರಾಗಿದ್ದ ಎಂದು ನಿಆರ್-26 ರಲ್ಲಿ ಸ್ಪಷ್ಟವಾಗಿ ನಮೂದು ಮಾಡಿಲ್ಲ ಎಂದರೆ ಗೈರು ಹಾಜರಿ ಮುಂದುವರೆದಿತ್ತು. ವಿಚಾರಣೆಯನ್ನು ಇಲಾಖೆಯ ನಿಯಮಗಳಿಗೆ ಅನುಸಾರವಾಗಿ ಮಾಡಿಲ್ಲ ಎನ್ನುವುದು ಸುಳ್ಳು. ತಾರತಮ್ಯತೆಯಿಂದ ವರದಿ ಸಲ್ಲಿಸಲಾಗಿದೆ ಎನ್ನುವುದು ಸುಳ್ಳು. ಅರ್ಜಿದಾರನಿಗೆ ಸರಿಯಾದ ಅವಕಾಶ ಕೊಟ್ಟಿಲ್ಲ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.